ಕಾಣುತ್ತಿಲ್ಲ. ನೀನು ನನಗೆ ಏನನ್ನು ಹೇಳಬೇಡ. ಹೊರಡು' ಎಂದು ಅವಳ ಭುಜಕ್ಕೆ ಆಸರೆ ನೀಡಿದ.

ಅರುಂಧತಿ 'ಸ್ವಲ್ಪ ಇರಿ ಅತ್ತಿಗೆ ಬರುತ್ತಾರೆ. ಅವರನ್ನೂ ಕರೆದುಕೊಂಡು ಹೋಗೋಣ'

'ಅತ್ತಿಗೆ ಎಲ್ಲಿ ಹೋಗಿದ್ದಾರೆ?'

'ಮುನಿತಾಯಿಯ ಮನೆಗೆ?'

'ಎಷ್ಟು ದೂರ ಆಗುತ್ತೆ?'

'ಎರಡು ಮೈಲಿ'

ಮನೋಹರ ಗಾಬರಿಯಿಂದ 'ಮೈಗಾಡ್... ಅಲ್ಲಿಯ ತನಕ ಕಾಯಲು ಸಾಧ್ಯವಿಲ್ಲ. ನಿನ್ನನ್ನು ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದ ನಂತರ ಪುನಃ ಇಲ್ಲಿಗೆ ಬಂದು ಅತ್ತಿಗೆಯನ್ನು ಕರೆದುಕೊಂಡು ಬರುತ್ತೇನೆ.'

ಅರುಂಧತಿ ಒಪ್ಪಿಕೊಂಡಳು. ಅಣ್ಣನ ಮಕ್ಕಳಿಗೆ ಎಲ್ಲಾ ವಿಷಯ ತಿಳಿಸಿ ಗಂಡನ ಜೊತೆ ಕಾರಿನಲ್ಲಿ ಕುಳಿತಳು. ಕಾರು ಚಲಿಸಿತು. ಸುಮಾರು ಒಂದು ಗಂಟೆಯ ನಂತರ ತುಂಗಮ್ಮ ಒಬ್ಬಳೇ ಮನೆಗೆ ಹಿಂತಿರುಗಿದಳು. ಮುನಿತಾಯಿ ಇರಲಿಲ್ಲ. ಹೆರಿಗೆ ಮಾಡಿಸಲು ಪಕ್ಕದ ಹಳ್ಳಿಗೆ ಹೋಗಿದ್ದಳು. ವಿಷಯ ತಿಳಿದ ನಂತರ ತುಂಗಮ್ಮ ಹಗುರವಾಗಿ ಉಸಿರಾಡಿದಳು.

ಏನೋ ಶಬ್ದ...!

ಯಾರೋ ಓಡಾಡುತ್ತಿದ್ದಾರೆ.

ಮಕ್ಕಳಿಬ್ಬರೂ ಹಾಲ್‌ನಲ್ಲಿ ತನ್ನ ಜೊತೆಯೇ ಇರುವಾಗ ಓಡಾಡುತ್ತಿರುವವರು ಯಾರು?

ಪುನಃ ಹೆಜ್ಜೆಗಳ ಶಬ್ದ!

ಗಾಳಿ 'ಬರೋ' ಎಂದು ನುಗ್ಗಿತು. ಗೋಡೆಯಲ್ಲಿ ಮೊಳೆ ಹೊಡೆದು ತೂಗು ಹಾಕಿದ್ದ ಎರಡು ಸೀಮೆಎಣ್ಣೆ ದೀಪಗಳು ಆರಿದವು.

ಕತ್ತಲು... ಕತ್ತಲು!

ಕತ್ತಲಲ್ಲಿ ಹೆಜ್ಜೆ ಶಬ್ದ! 'ಯಾರು... ಯಾರದು?'

ಉತ್ತರ ಬರಲಿಲ್ಲ.

ಮಕ್ಕಳಿಬ್ಬರೂ ತಾಯಿಯನ್ನು ಬಿಗಿಯಾಗಿ ತಬ್ಬಿಕೊಂಡರು. ಅವರೇನೂ ಹಾಲು ಕುಡಿಯುವ ಮಕ್ಕಳಲ್ಲ. ಕಾಲೇಜಿನಲ್ಲಿ ಓದುತ್ತಿದ್ದರು. ಆದರೆ ಮೊದಲಿನಿಂದಲೂ ಸಹ ಅವರು ಬೆಳೆದದ್ದೇ ಭಯದ ಗೂಡಿನಲ್ಲಿ.

ಪ್ರಕೃತಿಯಲ್ಲಿ ಬದಲಾವಣೆ!

ಗುಡುಗು... ಸಿಡಿಲಿನ ಆರ್ಭಟ. ಮಿಂಚು ಮೂಡುತ್ತಿದೆ. ಪರಮಾಶ್ಚರ್ಯಕರ ಸಂಗತಿ ಎಂದರೆ ಮುಂಬಾಗಿಲು ಮತ್ತು ಕಿಟಕಿಗಳು ಮುಚ್ಚಿಕೊಂಡವು.

ತಾವಾಗಿಯೇ ಮುಚ್ಚಿಕೊಂಡವು! ತಾಯಿ ಮತ್ತು ಮಕ್ಕಳು ಭಯಗೊಂಡರು.

* * *

ಅವಳ ನರಳುವಿಕೆ ಜಾಸ್ತಿಯಾಯಿತು. 'ಅಯ್ಯೋ... ಅಮ್ಮಾ... ರೀ... ರೀ... ನನ್ನಿಂದ ಆಗೋಲ್ಲ ಕಣ್ರೀ... ನನ್ನ ಪ್ರಾಣ ಹೋಗುತ್ತಿದೆ.' ಮನೋಹರ ಗಾಬರಿಯಾದ. ಆದರೆ ಕಾರಿನ ವೇಗ ಜಾಸ್ತಿ ಮಾಡುವಂತಿರಲಿಲ್ಲ. ಕಗ್ಗಾಡಿನ ತಿರುವು ರಸ್ತೆ!

ಮನೋಹರ 'ಅರು... ಸ್ವಲ್ಪ ಹೊತ್ತು ತಾಳ್ಮೆಯಿಂದ ಇರು.'

ಗಾಳಿ 'ಬರೋ' ಎಂದು ನುಗ್ಗುತ್ತಿದೆ. ಗಾಳಿ ಬಿರುಗಾಳಿಯಾಯಿತು.

ಮರದ ಕೊಂಬೆಗಳು ಲಟಲಟನೆ ಮುರಿದು ಬೀಳುತ್ತಿವೆ. ಗುಡುಗುಗಳ ಶಬ್ದ ಕೇಳಿ ಬರುತ್ತಿದೆ. ಮಳೆ ಸುರಿಯಲಾರಂಭಿಸಿತು. ಮನೋಹರ ಕೋಪದಿಂದ 'ಸುಡುಗಾಡು ಹಳ್ಳಿಗೆ ಬರೋದು ಬೇಡ ಅಂತ ಹೇಳಿದೆ. ಕೇಳಿದೆಯಾ ನೀನು. ಇವತ್ತು ಏನಾಗುತ್ತದೋ ಗೊತ್ತಿಲ್ಲ.'

ಅವಳು ಹಲ್ಲನ್ನು ಕಚ್ಚಿ ನೋವನ್ನು ಸಹಿಸಲು ಪ್ರಯತ್ನಿಸುತ್ತಿದ್ದಾಳೆ.

ಅಬ್ಬ... ಆಗುತ್ತಿಲ್ಲ!

ಕಿಟಾರನೆ ಕಿರುಚಿದಳು. ದೂರದಲ್ಲಿ ಏನೋ ಶಬ್ದ ಕೇಳಿ ಬಂದಿತು. ಆ ಶಬ್ದ ಹೇಗೆ ಉಂಟಾಯಿತು ಎಂದು ಗೊತ್ತಾಯಿತು. ರಸ್ತೆಗೆ ಅಡ್ಡಲಾಗಿ ದೊಡ್ಡ ಮರವೊಂದು ಉರುಳಿಕೊಂಡು ಬಿದ್ದಿದೆ. ಹೌಹಾರಿದ ಮನೋಹರ. ಸುರಿಯುತ್ತಿರುವ ಮಳೆಯಲ್ಲಿಯೇ ಕಾರಿನಿಂದ ಇಳಿದು ಬೇರೆ ಎಲ್ಲಾದರೂ ದಾರಿ ಇದೆಯೇನೋ ಎಂದು ನೋಡುತ್ತಿದ್ದಾನೆ.

ಇಲ್ಲ... ಕಾಣುತ್ತಿಲ್ಲ.

ಮನೋಹರ 'ಅರುಂಧತಿ ರಾಮನಗರಕ್ಕೆ ಹೋಗಲು ಬೇರೆ ಎಲ್ಲಾದರೂ ದಾರಿ ಇರುವುದೆ?'

'ಇಲ್ಲಾ ಕಣ್ರೀ...'

ಮನೋಹರ ಭಯಗೊಂಡ. ಈಗ ಏನು ಮಾಡುವುದು ಅಂತ ಗೊತ್ತಾಗುತ್ತಿಲ್ಲ. ಸೂಲಗಿತ್ತಿ ಮುನಿತಾಯಿಯೇ ಕಾಪಾಡಬೇಕು. ಪುನಃ ಹಳ್ಳಿಗೆ ಹೋಗಬೇಕು. ಕಾರನ್ನು ಸ್ಟಾರ್ಟ್ ಮಾಡಿದ. ಮೈಗಾಡ್ ಎಂಬ ಉದ್ಗಾರ ಹೊರಬಂದಿತು. ಯಾಕೆ ಅಂದರೆ ಕಾರು ಸ್ಟಾರ್ಟ್ ಆಗುತ್ತಿಲ್ಲ. ಆಗ ಅವನಿಗೆ ತುಸು ದೂರದಿಂದ ಯಾರೋ ಮಂತ್ರ ಹೇಳುತ್ತಿರುವುದು ಕೇಳಿಸಿತು. ಅವರೀಗ ಸ್ಮಶಾನದ ಹತ್ತಿರ ಇದ್ದರು!

ಕಗ್ಗಾಡಿನ ರಸ್ತೆಯಲ್ಲಿ ಕಾರು ನಿಂತಿದೆ. ಮಳೆ 'ಧೋ' ಎಂದು ಸುರಿಯುತ್ತಿದೆ. ಗಾಳಿ 'ಬರೋ' ಎಂದು ನುಗ್ಗುತ್ತಿದೆ.

ಅರುಂಧತಿ ಹೆರಿಗೆ ನೋವಿನಿಂದ ನರಳುತ್ತಿದ್ದಾಳೆ. ಕಾರಿನ ಆಕ್ಸಲ್ ಪೈಪ್ ತುಂಡಾಗಿತ್ತು. ರಸ್ತೆಯಲ್ಲಿ ಮರ ಬೇರೆ ಉರುಳಿಕೊಂಡು ಬಿದ್ದಿದೆ. ಅದು ಸ್ಮಶಾನದ ರಸ್ತೆ. ಆಗ ಕೇಳಿಸಿತ್ತು ಮಂತ್ರ. ಯಾರೋ ಸ್ಪಷ್ಟವಾಗಿ ಮಂತ್ರ ಹೇಳುತ್ತಿದ್ದಾರೆ. ಮನೋಹರ ಆತುರದಿಂದ 'ಅದು ಹತ್ತಿರದಲ್ಲೇ ಸ್ಮಶಾನ ಇದೆ ಅಂತ ಕಾಣುತ್ತೆ. ನಿನ್ನ ಅಣ್ಣ ಮಂತ್ರ ಹೇಳುತ್ತಿದ್ದಾರೆ. ನಾನು ಹೋಗಿ ಅವರನ್ನು ಕರೆದುಕೊಂಡು ಬರುತ್ತೇನೆ' ಎಂದು ಡೋರ್ ತೆಗೆದ.

ಅರುಂಧತಿ ತಡಬಡಿಸಿದಳು.

ಗಾಬರಿ, ಭಯದಿಂದ 'ಏನು... ಏನು... ನೀವು... ಈಗ ಸ್ಮಶಾನಕ್ಕೆ ಹೋಗುತ್ತೀರ?'

'ಹೌದು. ನಿನ್ನ ಅಣ್ಣ...' ಅರುಂಧತಿ ಅಂತಹ ನೋವಿನಲ್ಲಿಯೂ ಸಹ 'ಬೇಡ... ನೀವು ಅಲ್ಲಿಗೆ ಹೋಗುವುದು ಬೇಡ...'

'ಹಟ ಮಾಡಬೇಡ ಅದು...'

ಅರುಂಧತಿ 'ನನ್ನ ಅಣ್ಣ ಯಾವುದೋ ಕ್ಷುದ್ರಶಕ್ತಿಯನ್ನು ಆವಾಹನೆ ಮಾಡುತ್ತಿರುತ್ತಾನೆ. ಅಂತಹ ಸಮಯದಲ್ಲಿ ಅಲ್ಲಿಗೆ ಯಾರೇ ಹೋದರೂ ಸಹ ಅಪಾಯ ತಪ್ಪಿದ್ದಲ್ಲ.'

'ಹಾಗಲ್ಲ ಅರುಂಧತಿ...'

ಅರುಂಧತಿ 'ನನ್ನ ಅಣ್ಣಯ್ಯ ಇಂತಹ ಸಮಯದಲ್ಲಿ ಇಲ್ಲಿಗೆ ಬಂದು ಏನು ಮಾಡುತ್ತಾನೆ?'

ಮನೋಹರ ಏನನ್ನೋ ಹೇಳಲು ಬಾಯಿ ತೆರೆದ. ಆಗ ಅರುಂಧತಿ 'ಬೇಗ ಮನೆಗೆ ಹೋಗಿ ನಮ್ಮ ಅತ್ತಿಗೆ ಮತ್ತು ಸೂಲಗಿತ್ತಿಯನ್ನು ಕರೆದುಕೊಂಡು ಬನ್ನಿ.'

ಭಯದಿಂದಲೇ 'ಅಂದರೆ ಅಲ್ಲಿಯತನಕ ನೀನು ಒಬ್ಬಳೇ ಕಾಡಿನಲ್ಲಿ ಇರುತ್ತೀಯಾ.'

ತಲೆಯಾಡಿಸಿದಳು ಅರುಂಧತಿ.

ಮನೋಹರ ಕಾರಿನಿಂದ ಇಳಿಯುತ್ತಾ 'ಬೇಗ ಬೇಗ ಬಂದು ಬಿಡುತ್ತೇನೆ' ಎಂದು ಹೇಳಿ ಟಾರ್ಚ್ ಎತ್ತಿಕೊಂಡು ಓಡಲಾರಂಭಿಸಿದ. ಮಳೆ ಸುರಿಯುತ್ತಿದೆ.

ಕಾರಿನ ಬಾಗಿಲು ಮತ್ತು ಕಿಟಕಿಗಳನ್ನು ಅರುಂಧತಿ ಮುಚ್ಚಿದ್ದಾಳೆ.

'ಅಮ್ಮ... ಅಯ್ಯೋ...'

* * *

ಆ ಊರಿನ ಸ್ಮಶಾನದಲ್ಲಿ.

ಅಗ್ನಿಕುಂಡದ ಮೇಲೆ ಮಳೆಯ ನೀರು ಬೀಳದ ರೀತಿಯಲ್ಲಿ ದೊಡ್ಡ ತಗಡುಗಳನ್ನು ಬೊಂಬುಗಳ ಸಹಾಯದಿಂದ ನಿರ್ಮಿಸಲಾಗಿದೆ. ಗುರು ಮತ್ತು ಶಿಷ್ಯ ಅಗ್ನಿಕುಂಡದ ಎದುರು ಬೆತ್ತಲೆಯಾಗಿ ಕುಳಿತುಕೊಂಡಿದ್ದಾರೆ. ಅಗ್ನಿಕುಂಡದ ಸುತ್ತಲೂ ತಲೆಬುರುಡೆಗಳನ್ನು ಇರಿಸಲಾಗಿದೆ. ಭೂಮಿಯಲ್ಲಿ ಐದು ಅಡಿಗಳ ಉದ್ದ ಇರುವ ತ್ರಿಶೂಲವನ್ನು ಹೂಳಲಾಗಿದೆ. ಅದರ ತುದಿಯಲ್ಲಿ ನಿಂಬೆಹಣ್ಣನ್ನು ಚುಚ್ಚಲಾಗಿದೆ. ಅದರಿಂದ ರಕ್ತ ಹನಿಗುತ್ತಿದೆ.

ದಿಗ್ಬಂಧನ ಮುಗಿದಿದೆ. ಮುಂದಿನದು ಆವಾಹನೆ. ಕ್ಷುದ್ರಶಕ್ತಿಗಳಲ್ಲಿ ಎರಡು ಮತ್ತು ನಾಲ್ಕರ ಕ್ರಮದಲ್ಲಿ ಬರುವ ಚಂಡ ಮತ್ತು ಕಾಪಾಲನನ್ನು ಈಗ ಆಹ್ವಾನಿಸುತ್ತಿದ್ದಾರೆ. ಎರಡು ಶಕ್ತಿಗಳ ಸಂಗಮ. ಮಹಾ ಅನಾಹುತಕ್ಕೆ ನಾಂದಿ ಆಗಲಿದೆ. ಅಗ್ನಿಕುಂಡದ ಹತ್ತಿರ ಮೂರು ಮಣ್ಣಿನ ಗೊಂಬೆಗಳನ್ನು ಮಾಡಿ ಇಡಲಾಗಿದೆ. ಎರಡು ಹೆಣ್ಣಿನ ಗೊಂಬೆಗಳು.

ಒಂದು ಗಂಡಿನ ಗೊಂಬೆ. ಮನೋಹರ ಮಾಂತ್ರಿಕ ವಿದ್ಯೆಯನ್ನು ಪರೀಕ್ಷೆ ಮಾಡಬೇಕು ಎಂದು ಸುಳ್ಳನ್ನು ಹೇಳಿದ್ದ.

ಬಿಜಿನೆಸ್‌ನಲ್ಲಿ ಕೆಲವರಿಂದ ನನಗೆ ತುಂಬಾ ನಷ್ಟ ಉಂಟಾಗುತ್ತಿದೆ. ಈ ರಾತ್ರಿ ಅವರು ಸಾಯದೆ ಇದ್ದರೆ ತಾನು ಪೂರ್ತಿಯಾಗಿ ಮುಳುಗಿ ಹೋಗುತ್ತೇನೆ ಎಂದು ಮನೋಹರ ಹೇಳಿದ್ದ. ಪ್ರೀತಿಯ ತಂಗಿಯ ಗಂಡನಿಗೆ ಬಿಜಿನೆಸ್‌ನಲ್ಲಿ ತೊಂದರೆಯಾಗಬಾರದು ಎಂದು ಭಯಂಕರ ಕ್ಷುದ್ರಶಕ್ತಿಗಳನ್ನೇ ಆಹ್ವಾನಿಸಿದ್ದ. ಆದರೆ ಸತ್ಯ ಗೊತ್ತಿರಲಿಲ್ಲ. ಹೇಳಲಾಗದ ಭಯಂಕರ ಸತ್ಯ.

ಮನೋಹರ ವಿದ್ಯಾವಂತ. ಆದರೆ ಇಂತಹ ತಪ್ಪನ್ನು ಯಾಕೆ ಮಾಡಿದ ಅಂತ ಗೊತ್ತಿಲ್ಲ. ಅದರ ಪರಿಣಾಮ ಇನ್ನೇನು ಕೆಲವೇ ನಿಮಿಷಗಳಲ್ಲಿ ಕಾಣಿಸಿಕೊಳ್ಳಲಿದೆ. ಮನೋಹರ